"ಟೆಲಿಫೋನ್ ಟ್ಯಾಪಿಂಗ್" ಬಗ್ಗೆ

ಶ್ರೀ ಕೆ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೆ, ನಾನು ಸದನದ ನಿಯಮಾವಳಿ ಪ್ರಕಾರ ನಿಯಮ ೬೮ರ ಕೆಳಗೆ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಮೊನ್ನೆ ಶನಿವಾರದ ಪತ್ರಿಕೆಗಳಲ್ಲಿ ಅಧಿಕೃತವಾಗಿ ಪ್ರಕಟವಾಗಿರುವ ವಿಚಾರದಲ್ಲಿ "ಟೆಲಿಫೋನ್ ಟ್ಯಾಪಿಂಗ್" ರಾಜ್ಯ ಸಭಾ ಕಮಿಟಿ ವರದಿ ಪ್ರಕಾರ ರಾಮಕೃಷ್ಣ ಹೆಗಡೆಯವರನ್ನು ಇಂಡೆಕ್ಟ್ ಮಾಡಿದೆ. ಈ ವಿಚಾರದಲ್ಲಿ ಪತ್ರ ವ್ಯವಹಾರಗಳು ಕೂಡ ನಡೆದಿದೆ. ಅಫೀಸಿಯಲ್ ಡಾಕ್ಯುಮೆಂಟ್‌ನಲ್ಲಿ ಒಂದು ಪತ್ರವನ್ನು ಕೂಡ ಸೃಷ್ಟಿ ಮಾಡಿ ಅದನ್ನು ಆ ಕಡತದಲ್ಲಿ ಸೇರಿಸಿದ್ದಾರೆಂದು ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಬೊಮ್ಮಾಯಿಯವರು ಅತ್ಯಂತ ಆಶ್ಚರ್ಯಕರ ರೀತಿಯಲ್ಲಿ ಯಾವ ವಿಚಾರವನ್ನು ತಿಳಿಸದೇ ಇದ್ದಾರೆಂದು ಜೊತೆಗೆ ರಾಮಕೃಷ್ಣ ಹೆಗಡೆಯವರು ಇಂಥಿಂತಹವರ ಟೆಲಿಫೋನ್‌ಗಳನ್ನು ಟ್ಯಾಪಿಂಗ್ ಮಾಡಲು ತಿಳಿಸಿದ್ದಾರೆಂಬ ಬಗ್ಗೆ ನಾವು ಇಲ್ಲಿ ವಿಚಾರಣೆ ಮಾಡದಿದ್ದರೆ ಹೇಗೆ? ಈ ವಿಚಾರದ ಗಂಭೀರತೆಯನ್ನು ಅರಿತು ತಾವು ಇದನ್ನು ಚರ್ಚೆ ಮಾಡಲಿಕ್ಕೆ ಅಪ್ಪಣೆಯನ್ನು ಕೊಡಬೇಕಾಗಿದೆ. ಇದರ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಜೊತೆಗೆ ಸರ್ಕಾರದ ಮೇಲೆ ಒಂದು ಗೂಬೆ ಕೂರಿಸಿದ್ದಾರೆ. ಈ ಹಿಂದಿನ ಇಬ್ಬರು ಮುಖ್ಯಮಂತ್ರಿಗಳಲ್ಲಿ ಯಾರು ತಪ್ಪು ಮಾಡಿದ್ದಾರೆ ಎನ್ನುವುದು ನಿರ್ದಿಷ್ಟವಾಗಿ ಗೊತ್ತಾಗಬೇಕಾಗಿದೆ. ರಾಜ್ಯ ಸರ್ಕಾರ ಮತ್ತು ಇಬ್ಬರು ಮಾಜಿ ಮುಖ್ಯಮಂತ್ರಿಗಳು ಇದರಲ್ಲಿ ಒಳಗೊಂಡಿರುವುದರಿಂದ ಈ ಬಗ್ಗೆ ಚರ್ಚೆಯಾಗಬೇಕಾಗಿದೆ. ಇದು ಬಹಳ ಗಂಭೀರವಾದ ವಿಚಾರ. ಯಾರ ಫೋನ್‌ಗಳನ್ನು ಟ್ಯಾಪ್ ಮಾಡಬೇಕೆಂದು ಹೇಳಿದ್ದರು? ಆ ಸದಸ್ಯರುಗಳು ಯಾರು ಆ ಜನರು ಯಾರು ಎಂಬುದು ತಿಳಿಯಬೇಕಾಗಿದೆ. ಇದು ನಿಜವಾಗಿದ್ದರೆ ಸವಂಸ್ಥೆಗಳು ಪ್ರಿವಿಲೇಜ್ ಇಷ್ಯೂ ಆಗುತ್ತದೆ. ಅನೇಕ ಸವಂಸ್ಥೆಗಳು ಇದರಲ್ಲಿ ಸೇರಿರುವುದರಿಂದ ಇದರ ಬಗ್ಗೆ ಸ್ಥೂಲವಾಗಿ ಪರಿಶೀಲನೆ ಮಾಡಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಹೊಸದಾಗಿ ಬಂದಿರುವ ಈ ಪ್ರಕರಣವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಸಭಾಧ್ಯಕ್ಷರು.— ನೀವು ನಿಯಮ ೬೮ರ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಕೆ. ಲಕ್ಕಪ್ಪ.— ಇದನ್ನು ಪ್ರಿವಿಲೇಜ್ ಇಷ್ಯೂ ಆಗಿ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರವಿದೆ. ಆದ್ದರಿಂದ ನಾನು ನಿಯಮ ೬೮ರ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.— ನಿಯಮ ೬೮ರ ವಿಧಿ ನಿಯಮದ ಬಗ್ಗೆ ಮಾನ್ಯ ಖರ್ಗೆಯವರು ಸಹ ಒಂದು ಸೂಚನೆ ಕೊಟ್ಟಿದ್ದಾರೆ. ತಾವು ಇವತ್ತು ೧೦-೩೦ಕ್ಕೆ ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ಈ ಎರಡೂ ಸೂಚನೆಗಳನ್ನು ಸಹ ನಾನು ನೋಡುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಿಯಮ ೬೮ರ ಪ್ರಕಾರ ಕೊಟ್ಟಿರತಕ್ಕ ನೋಟೀಸನ್ನು ನಾನು ನೋಡಿದ್ದೇನೆ. ನೋಟೀಸಿನ ಬರವಣಿಗೆಯ ಪ್ರಕಾರ ಚರ್ಚೆಯ ಅಗತ್ಯವಿಲ್ಲ. ಆ ಕಾಪಿ ನನ್ನ ಹತ್ತಿರ ಇಲ್ಲ. ಅವರೇ ಹೇಳಿರುವಂತೆ ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶವಿಲ್ಲ. ಅವರು ಮುಖ್ಯವಾಗಿ ಏನನ್ನು ಚರ್ಚೆ ಮಾಡಬೇಕೆಂದಿದ್ದಾರೆ?

There should be a specific issue for discussion. What is that they want to discuss ? Whether they want to discuss the conduct of a Member-This is No. 1. Or whether they want to discuss the report of the Rajya Sabha Committee-Number 2 or they want to discuss the conduct of the then Chief Secretary who offered his explanation to the committee or they want to discuss the conduct of the then Chief Ministers. What is that they want to discuss ? There is nothing. ತಾವು ದಯವಿಟ್ಟು...

SRI K. LAKKAPPA.— The conduct of the former Chief Minister is involved. Former Chief Secretaries are also involved. Therefore, it is ultimately the State is involved and members at that time whose names were tapped. That also to be discussed...

MR. SPEAKER.— Names cannot be tapped. Only phones can be tapped. Mr. Lakkappa has raised the matter. ಇದನ್ನು ನಾನು ಪರಿಶೀಲನೆ ಮಾಡುತ್ತಿದ್ದೇನೆಂದು ಅವರಿಗೆ ಹೇಳಿದ್ದೇನೆ.

SRI D. B. CHANDRE GOWDA.— Atleast you should allow me to express my view particularly on Section 68 before it is admitted. ತಾವು ಅಡ್ಮಿಟ್ ಮಾಡಿ ಚರ್ಚೆ ಮಾಡಲು ಹೇಳಿದರೆ ನಾನು ಮಾತನಾಡುವುದಕ್ಕೆ ಏನಿದೆ ? ಅಡ್ಮಿಸಿಬಿಲಿಟಿ ಕೂಡ...

MR. SPEAKER.— I have taken a position that I have heard certain Hon'ble Members including the Leader of the House about the admissibility of this particular matter under Bule 68. I have heard Senior Members and I have heard the Leader of the House. I have heard the Law and Parliamentary Affairs Minister's exposition on this. If you would like to add in order to enlighten me on this...

ಶ್ರೀ ಡಿ.ಬಿ. ಚಂದ್ರೇಗೌಡ.— ಅವರು ನಿಯಮ ೬೮ ರಲ್ಲಿ ಏನು ನೋಟೀಸ್ ಕೊಟ್ಟಿದ್ದಾರೆಂದರೆ ಟು ರೈಸ್ ಎ ಡಿಸ್‌ಕಷನ್ ಎಂದು ಹೇಳಿದ್ದಾರೆ. Precisely the matter to be raised but what is that they want to discuss, I would like to know. They must be specific. Therefore, I would like to draw the attention of the Hon'ble Chair to the fact that... ತಾವು ದಯವಿಟ್ಟು ಅದನ್ನು ಓದಬೇಕೆಂದು ಕೇಳಿಕೊಳ್ಳುತ್ತೇನೆ. I never thought that it would come, otherwise, I would have brought the copy. The notice as it is contradictory. ಮಂತ್ರಿಯವರು ಏನನ್ನು ಚರ್ಚೆ ಮಾಡುತ್ತೇವೆ ಎನ್ನುತಕ್ಕ ಇಷ್ಟೂ ಅನ್ನೇ ಅವರು ಹೇಳುವುದಿಲ್ಲ. I do understand. I am not trying to run away from the discussion but at the same time I should know what is to be discussed. There are 3-4 issues involved in it. If they want to discuss the conduct of a Member, the Member should be present. If they want to discuss the report of the Rajya Sabha Committee, which has already been placed on the Table of the House, whether we can discuss that report is the second question. If they want to discuss the conduct of the then Chief Secretary who offered evidence before the Committee, then, it is altogether a different matter, and if they want to discuss the conduct of the then Chief Ministers...

SRI K. B. KOLIWAD.— Is there any provision for raising objections like this ?

MR. SPEAKER.— I am seeking some guidance from the Leader of the Opposition.

SRI D. B. CHANDRE GOWDA.— Therefore if they want to discuss the conduct of the then Chief Minister, it is altogether different. They should be specific as to what they want to discuss. If they want to discuss the telephone tapping issue, in general. I have no objection. Yes, as long as Section 5 of the Act is there in existence. That is an Act of Parliament. If that can be discussed in the Legislature and if we could offer our suggestions, I have no objection. Let me make myself atleast clear about it. Through

you, I appeal to the Member concerned and I will appeal to the Chair to enlighten me as to what do you want to permit them to raise and what is their notice.

MR. SPEAKER.— What do you want to discuss ?

SRI K.B. KOLIWAD.— I am also one of the signatories.

SRI K. LAKKAPPA.— May I submit to you, Sir ? My friend, Mr. Chandre Gowda, the Leader of the Opposition has stated what subject we want to discuss.

The subject under rule 68 has got wide scope to discuss the issue pertaining to the State. We are not asking the conduct of any member. The issue is wider than that. The Rajya Sabha Committee discussed this issue and indicted Shri Ramakrishna Hegde that he is responsilble for telephone tapping...

SRI D. B. CHANDRE GOWDA.—I take objection to this. No indiction has been passed. Can we discuss the Rajya Sabha Committee report in this House? I would like to know.

MR. SPEAKER.—Let me try to understand Mr. Lakkappa. That is his impression. I would like to know from Mr. Lakkappa whether you have a copy of the report of the committee on subordinate legislation of the Rajya Sabha with rerference to this telephone tapping issue. Do you have that report ?

SRI K. LAKKAPPA.—I don't have at the moment; On the basis of what newspapers have mentioned and also.....

MR. SPEAKER.—On the basis of a newspaper report you have come to some conclusion.

SRI K. LAKKAPPA.—Two ex-Chief Ministers have given.....

(Interruption)

SRI D. B. CHANDRE GOWDA.—The Chair should protect us.

MR. SPEAKER.—I will certainly protect you.

SRI K LAKKAPPA.—On the information collected by the State Government.....the than Chief Ministers were there.....It has been reported in the Rajya Sabha Committee. That is a fact. because the Chief Secretary accecording to the statement of the Chief Minister on the floor of the House that he came and he went to give evidence. On that basis what is transpired is that one loose sheet has been inserted.

MR. SPEAKER.—I am not allowing you to go into the details.

SRI K. LAKKAPPA.—No details, what the facts reported in the press.....

MR. SPEAKER.—Only about the admissibility of the particular motion under Rule 68 you can speak.

SRI K. LAKKAPPA.—Necessary document you can get it before you arive at a conclusion.

MR. SPEAKER.—Exactly, what I am trying is to get the report of the committee of parliament before I give my ruling.

SRI P. G. R. SINDHIA.—How Mr. Lakkappa on the basis of the press report can assume that the committee has indicated Mr. Ramakrishna Hegde. It becomes part of the proceedings of this House. It should go.

MR. SPEAKER.—Assumptions are possible ; What he has read in the newspapers.....

SRI D. B. CHANDRE GOWDA.—He should own the responsibility.

SRI K. LAKKAPPA.—Do you think a State officer has made any forgery. Should we not investigate in this matter?

SRI K. B. KOLIWAD.—In the very press statement Mr. Ramakrishna Hegde himself has stated that the involvement of the State Government is there.

MR. SPEAKER.—I am only concerned with the limited question I am not going to allow to speak on the merits of the case at all. I have not allowed anybody to go into the merits of the case.

SRI K. B. KOLIWAD.—I am trying to convince you. The involement of the Government is there. Therefore, we are entitled to discuss.

MR. SPEAKER.—Don't you think it will be better for us to obtain a copy of the report of the Committee.

SRI K. B. KOLIWAD.—Of course, it is better.

MR. SPEAKER.—I am at it. I am trying to get it.

† ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ರಾಜ್ಯಸಭೆಯಲ್ಲಿ ಮಂಡನೆ ಆಗಿರತಕ್ಕಂಥ ವರದಿಯಬಗ್ಗೆ ಇಲ್ಲಿ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೆಂದು ನಾನು ನಂಬಿ ಕೊಂಡಿಲ್ಲ. ಆದರೆ ಆದನ್ನು ಬಿಟ್ಟು ಉಳಿದೆಲ್ಲ ವಿಚಾರಗಳ ಬಗ್ಗೆ ಚರ್ಚೆ ಮಾಡತಕ್ಕದ್ದರ ಅವಶ್ಯಕತೆ ಇದೆ. ಕಾರಣವೇನೆಂದರೆ ಅನೇಕ ವಿಚಾರಗಳು ಇದರಲ್ಲಿ ಅಡಕವಾಗಿವೆ. ಒಬ್ಬ ವ್ಯಕ್ತಿಗೆ ರಾಜ್ಯಾಂಗ ದತ್ತವಾಗಿ ಬಂದ ಮೂಲಭೂತ ಹಕ್ಕುಗಳ ಪ್ರಶ್ನೆ ಇಲ್ಲಿ ಬಂದಿದೆ. ಈ ಹಿಂದಿನ ಸರ್ಕಾರಗಳು ಯಾವ ರೀತಿ ನಡೆದುಕೊಂಡಿವೆ ಹಾಗೂ ಅಧಿಕಾರ ನಡೆಸಿದಂಥವರು ಹೇಗೆ ನಡೆದುಕೊಂಡಿದ್ದಾರೆ ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ.

ಮತ್ತೆ ಆದೇ ರೀತಿಯಲ್ಲಿ ಇನ್ನು ಮುಂದೆಯೂ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ ಹರಣವಾಗತಕ್ಕ ಸಂದರ್ಭಗಳು ನಮ್ಮ ಮುಂದೆ ಒರಬಹುದು, ಇಂಕಹ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಾವು ಹೇಳಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಇದು ಚರ್ಚೆಯಾಗಬೇಕಾಗಿದೆ. ತಾವು ಕಳೆದ ಸಾರಿ ಏನು ಹೇಳಿದಿರಿ, ಇಲ್ಲಿ ಯಾರು ಇದಕ್ಕೆ ಸಂಬಂಧಪಟ್ಟ ವ್ಯಕ್ತಿ ಇದ್ದಾರೆ, ಅವರೂ ಕೂಡ ಈ ಸದನದ ಸದಸ್ಯರಾಗಿರುವುದರಿಂದ, ಅವರು ಇಲ್ಲಿರಬೇಕು ಎಂಬುದು ಸಾಮಾನ್ಯ ನ್ಯಾಯವಲ್ಲವೇ ಎಂಬ ಅಭಿಪ್ರಾಯಕ್ಕೆ ತಾವು ಬಂದು. ತಮ್ಮ ತೀರ್ಪನ್ನು ಕಾದಿರಿಸಿರುತ್ತೀರಿ: ಈಗ ಅವರಿಗೆ ನೋಟೀಸ್ ಕೊಟ್ಟು ಕರೆಸುತ್ತೀರಾ ಅಥವಾ ಅವರಾದರೂ ಬರುವುದಕ್ಕೆ ಅವಕಾಶ ಇದೆ, ಇದು ತಮಗೆ ಬಿಟ್ಟಿರತಕ್ಕದ್ದು. ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡ ಬಾರದು; ಈ ಸದನದಿಂದ ಹೊರಗಡೆ ಇದನ್ನು ಇಡಬೇಕು ಎಂಬ ಪ್ರಯತ್ನ ಏನು ನಡೆಯುತ್ತಿದೆ:

ಇದಕ್ಕೆ ನನ್ನ ಒಪ್ಪಿಗೆ ಇಲ್ಲ ಇದು ಚರ್ಚೆಯಾಗಬೇಕಾದ ಅವಶ್ಯಕತೆ ಇದೆ. ದಯಮಾಡಿ, ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರೇ,—ಅಂತಹ ಪ್ರಯತ್ನಗಳು ನಡೆದ ಹಾಗೆ ನನಗೆ ಕಾಣಲಿಲ್ಲ.

ಶ್ರೀ ಸಿ. ಬೈರೇಗೌಡ.—ವಿರೋಧಪಕ್ಷದ ನಾಯಕರು ಏನು ಹೇಳಿದರು, ಯಾವ ಇಷ್ಯೂ ಮೇಲೆ ಇಲ್ಲಿ ಚರ್ಚೆ ಮಾಡುತ್ತಾರೆ ಎನ್ನುವುದು ಇಲ್ಲಿ ಇಷ್ಯೂ ಇಲ್ಲದೆ ಪಬ್ಲಿಕ್ ಇಂಪಾರ್ಟೆನ್ಸ್ ಟೆಲಿಫೋನ್ ಟ್ಯಾಪಿಂಗ್ ವಿಚಾರದಲ್ಲಿ ವರದಿಯನ್ನು ಬಿಟ್ಟು, ನಾನು ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, ರಾಜ್ಯ ಸಭೆಯಲ್ಲಿ ಮಂಡನೆಯಾಗಿರತಕ್ಕ ವರದಿ ಈ ಸದನದ ಸ್ವತ್ತಲ್ಲ. ಇಲ್ಲಿ ಕೌನ್ಸಿಲ್‌ನಲ್ಲಿ ಏನು ನಡೆಯುತ್ತದೆ, ಅದು ಯಾವತ್ತೂ ಇಲ್ಲಿ ಚರ್ಚೆಯಾಗುವುದಿಲ್ಲ. ಆದೇ ರೀತಿ ಲೋಕಸಭೆಯಲ್ಲಿ ರಾಜ್ಯ ಸಭೆಯಲ್ಲಿ ನಡೆಯತಕ್ಕ ನಡವಳಿಕೆಗಳ ಬಗ್ಗೆ ಬಹುಶಃ ನನಗೆ ಗೊತ್ತಿರುವ ಹಾಗೆ ಇಲ್ಲಿ ಯಾವತ್ತೂ ಚರ್ಚೆಯಾಗಿಲ್ಲ. ಆದ್ದರಿಂದ ಈ ವರದಿಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲವೆಂದು ನನ್ನ ಅಭಿಮತ. ಆದರೆ ಅಲ್ಲಿರತಕ್ಕ ವಿಚಾರ ಏನಿದೆ, ನಡೆದಿರತಕ್ಕ ಘಟನೆಗಳು ಏನಿದೆ, ರಾಜ್ಯ ಸರ್ಕಾರದಲ್ಲಿ ಯಾವ ರೀತಿ ನಡೆದುಕೊಂಡಿದೆ, ಏನೇನು ಆಗಿದೆ ಎಂಬುವೆಲ್ಲಾ ಈ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿರುವುದರಿಂದ, ರಾಜ್ಯ ಸರ್ಕಾರದಲ್ಲಿ ನಾವೂ ಕೂಡ ಭಾಗಿಯಾಗಿರುವ ಕಾರಣದಿಂದ ಈ ಸದನದ ಈ ವಿಚಾರದಲ್ಲಿ ಚರ್ಚೆಯಾಗಬೇಕಾದ ಅವಶ್ಯಕತೆ ಇದೆ, ದಯವಾಡಿ ಇದಕ್ಕೆ ಯಾವ ನಿಯಮಾವಳಿಗಳನ್ನು ಪಾಲನೆ ಮಾಡಬೇಕೆಂಬುದು ತಮಗೆ ಬಿಟ್ಟಿರುವುದು. ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಇದಕ್ಕೆ ಸಂಬಂಧಪಟ್ಟವರು ಸದನದಲ್ಲಿರಬೇಕೆಂಬ ಹಂತವನ್ನು ನಾವು ತಲುಪಿದ್ದೇವೆ.

MR. SPEAKER.—It is a public importance matter. I am looking at it.

ಶ್ರೀ ಡಿ. ಬಿ. ಚಂದ್ರೇಗೌಡ.—ಕಮಿಟಿ ಇಂಡಿಕ್ಟ್ ಮಾಡಿದೆ ಎಂದು ಏನು ಹೇಳಿದ್ದಾರೆ. That should not be a part of the record. How can it be or otherwise he should own the responsibility.

MR. SPEAKER.—Are you owning that responsibility Mr. Lakkappa?

ಶ್ರೀ ಎಸ್. ಬಂಗಾರಪ್ಪ.—ಸಭಾಧ್ಯಕ್ಷರೇ, ಪತ್ರಿಕಾ ವರದಿಗಳ ವಿಚಾರದಲ್ಲಿ ಕೆಲವು ಸಾರಿ ಅಭಿಪ್ರಾಯಗಳು ಭಿನ್ನವಾಗಿರುತ್ತವೆ, ಇದು ಸಹಜ. ವಿರೋಧ ಪಕ್ಷದ ನಾಯಕರು ಒಂದು ನಿಮಿಷ ಗಮನ ಕೊಡಬೇಕು. ಈ ಪತ್ರಿಕಾ ವರದಿಗಳನ್ನು ಆಧರಿಸಿ, ಕೆಲವೊಮ್ಮೆ ಚರ್ಚೆ ಮಾಡಬಾರದು ಎನ್ನತಕ್ಕ ತೀರ್ಪುಗಳನ್ನೂ ನಾವು ನೋಡಿದ್ದೇವೆ. ಆದರೆ ಮಾನ್ಯ ಸದಸ್ಯರು ಪೆಚ್ಚಾಗಿ ಎಲ್ಲವನ್ನೂ ನೋಡಿಕೊಂಡು ಬಂದು ಹೇಳುವುದಕ್ಕಾಗುವುದಿಲ್ಲ, ಪತ್ರಿಕಾ ಮಾಧ್ಯಮದ ಬಗ್ಗೆ ಹೆಚ್ಚು ಒತ್ತು ಕೊಟ್ಟು, ನಾವು ವ್ಯವಹಾರ ಮಾಡತಕ್ಕ ಒಂದು ವ್ಯವಸ್ಥೆ ನಮ್ಮಲ್ಲಿ ಇರುವುದರಿಂದ, ಪತ್ರಿಕಾ ವರದಿಗಳ ಮೇಲೂ, ಈ ಕಡೆ ಇರಬಹುದು ಅಥವಾ ತಮ್ಮಿಂದ ಇರಬಹುದು. ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇವೆ, ದೃಢೀಕರಿಸುತ್ತೇವೆ. ಚರ್ಚೆಗೆ ಅವಕಾಶ ಕೊಡಬೇಕೇ ಬಿಡಬೇಕೇ ಎಂಬುದನ್ನು ತಮ್ಮ ವ್ಯಾಪ್ತಿಗೆ ಸೇರಿರತಕ್ಕ ವಿಚಾರ. ಈ ವಿಚಾರದಲ್ಲಿ ಮಾನ್ಯ ಬೈರೇಗೌಡರು ಒಂದು ಮಾತು ಹೇಳಿದರು. ಏನೆಂದರೆ ನಮ್ಮ ವೈಯಕ್ತಿಕವಾದ ಹಕ್ಕು ಬಾಧ್ಯತೆಗಳು ಏನಿವೆ, ಅವು ಹನನವಾಗತಕ್ಕ ವಿಚಾರ ಬರುವುದರಿಂದ, ಈ ವಿಚಾರ ಚರ್ಚೆಯಾಗಬೇಕು ಎಂದು ಈ ಸರ್ಕಾರ ಇರಬಹುದು ಮತ್ತೊಂದು ಸರ್ಕಾರ ಇರಬಹುದು ಎನ್ನತಕ್ಕ ಮಾತನ್ನು ಹೇಳಿದರು. ಇವತ್ತಿನ ಪತ್ರಿಕೆಯಲ್ಲಿ ನಮ್ಮ ಮುಖ್ಯ ಮಂತ್ರಿಗಳು ಬೊಂಬಾಯಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅಲ್ಲಿ ಅವರನ್ನು ಪ್ರಶ್ನೆ ಕೇಳಿದಾಗ, ಉತ್ತರವನ್ನೂ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಇದೇ ರೀತಿಯ ಅಭಿಪ್ರಾಯವನ್ನೂ ನಾವು ಇಟ್ಟುಕೊಂಡಿದ್ದೇವೆ. ವ್ಯಕ್ತಿಗಳು ಈ ಸದನದ ಸದಸ್ಯರು ಇರಬಹುದು, ಮತ್ತೊಬ್ಬರು ಇರಬಹುದು. ಅಂದರೆ ಸಾರ್ವಜನಿಕ ಜೀವನದಲ್ಲಿರತಕ್ಕ, ರಾಜಕಾರಣದಲ್ಲಿರತಕ್ಕ, ಸಾಮಾಜಿಕ ಸೇವೆಯನ್ನು ನಿಜವಾಗಿಯೂ ಮಾಡತಕ್ಕ ವ್ಯಕ್ತಿಗಳು ಯಾರಿದ್ದಾರೆ, ಅವರು ಈ ವಿಚಾರಗಳನ್ನು ಮಾಡಬಾರದು. ಆದರೆ ವಿದ್ವಂಸಕ ಕೃತ್ಯಗಳನ್ನು ಮಾಡತಕ್ಕ ಜನ ಯಾರಿದ್ದಾರೆ, ಅಂತಹವರ ಟೆಲಿಫೋನ್ ಟ್ಯಾಪಿಂಗ್ ಮಾಡಬಾರದೆಂದು ಹೇಳುವುದಕ್ಕಾಗುವುದಿಲ್ಲ, ದೇಶದ ಹಿತದೃಷ್ಟಿಯಿಂದ ಕೆಲವೊಮ್ಮೆ ಯಾವುದೇ ಪಕ್ಷದ ಸರ್ಕಾರವಿದ್ದರೂ ಸಹ ಇದನ್ನು ಮಾಡತಕ್ಕ ಸಂದರ್ಭ ಬರುತ್ತದೆ. ಆದರೆ ವಿವರಗಳಿಗೆ ನಾನು ಈಗ ಹೋಗುವುದಿಲ್ಲ.

ಆದರೆ ವ್ಯಕ್ತಿಯ ಹಕ್ಕು ಹರಣ ಆಗದ ಹಾಗೆ ನೋಡಿಕೊಳ್ಳಬೇಕೆಂಬುದು ನಮ್ಮೆಲ್ಲರ ಇಚ್ಛೆ, ಹಾಗೂ ಅಭಿಪ್ರಾಯವಾಗಿದೆ. ಸರಕಾರದ ಇಚ್ಛೆ ಕೂಡಾ ಅದೇ ಆಗಿದೆ. ನಾವು ರಾಜ್ಯ ಸಭಾ ಸಮಿತಿಯ ವರದಿಯ ಬಗ್ಗೆ ಹೇಳಿಲ್ಲ. ಮಾನ್ಯ ಬೈರೇಗೌಡರು ಈ ವಿಚಾರ ಎತ್ತಿದ್ದರಿಂದ ಹೇಳಿದೆ. ರಾಜ್ಯ ಸಭಾ ಸಮಿತಿ ಏನು ವರದಿ ಕೊಟ್ಟಿದೆ ಎಂಬ ವಿಚಾರದಲ್ಲಿ ಆ ವರದಿಯನ್ನು ತರಿಸಿ ನೋಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಆದರೆ ಮಾನ್ಯ ಸದಸ್ಯರಾದ ಲಕ್ಕಪ್ಪನವರು ಈ ಒಂದು ವರದಿಯನ್ನು ಆಧರಿಸಿ ಪತ್ರಿಕೆಯಲ್ಲಿ ಏನು ವಿಚಾರ ಬಂದಿದೆ ಅದನ್ನು ಆಧಾರವಾಗಿ ಇಟ್ಟುಕೊಂಡು ಹೇಳುತ್ತಿದ್ದಾರೆ. ಅದನ್ನು ತಿಲೋ ಮಾಡುವುದು ಬಿಡುವುದು ತಪ್ಪು ವ್ಯಾಪ್ತಿಗೆ ಸೇರಿದ್ದು.

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಇಲ್ಲಿ ಪ್ರಮುಖವಾದ ವಿಚಾರ ಎಂದರೆ Let us not worry about Mr Ramakrishna Hegde ಇಲ್ಲಿ ಇನ್ನೊಬ್ಬರು ನಮ್ಮ ರಾಜ್ಯ ಸರಕಾರದ ಮಾಜಿ ಚೀಫ್ ಸೆಕ್ರೆಟರಿಯವರು ಏನು ಇನ್‌ವಾಲ್ವ್ ಆಗಿದ್ದಾರೆ, ಆ ಕಮಿಟಿಯ ಮುಂದೆ ಏನು ಸಾಕ್ಷ್ಯಾಧಾರಗಳನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಚರ್ಚೆ ಮಾಡೋಣ. Here there is an involvement of the former Chief Secretary to the Government. He was a Government and still he is drawing a pension of Rs. 2000—3000. We want to know what type of evidence he has tendered before that Committee ಏತಕ್ಕೆಂದರೆ ಅವರು ಸರಕಾರಿ ಅಧಿಕಾರಿ ಆಗಿರುವುದರಿಂದ, ಮಾಡಬೇಕು, ರಾಮಕೃಷ್ಣ ಹೆಗಡೆಯವರ ವಿಚಾರ ನಾವು ಮಾತನಾಡುವುದು ಬೇಡ. ಅದನ್ನು ತಾವು ಮೆರಿಟ್ ಮೇಲೆ ಡಿಸ್ಪೋಸ್ ಮಾಡುತ್ತೀರಿ. let us not worry about that issue ಆದರೆ ನಮ್ಮ ಮಾಜಿ ಚೀಫ್ ಸೆಕ್ರೆಟರಿಯವರು ಏನು ಹೇಳಿದ್ದಾರೆ ಆ ವಿಚಾರ ನಾವು ಡಿಸ್ಕಸ್ ಮಾಡುವುದಕ್ಕೆ ನಮಗೆ ಹಕ್ಕಿದೆ. ಈ ವಿಷಯ ಬೆಳಕಿಗೆ ಬರಲೇಬೇಕು. ಅದನ್ನು ಡಿಸ್ಕಸ್ ಮಾಡಲೇಬೇಕು.

ಶ್ರೀ ಕೆ. ಲಕ್ಕಪ್ಪ.—ಅವರ ಪಕ್ಷದ ಸೆಕ್ರೆಟರಿಯವರೇ ಹೆಗಡೆಯವರ ರಾಜೀನಾಮೆಯನ್ನು ಡಿಮ್ಯಾಂಡ್ ಮಾಡಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದು ನಮ್ಮ ಪಕ್ಷದ ಆಂತರೀಕ ವಿಚಾರ. ಅದರ ಮೇಲೆ ನೀವು ಏತಕ್ಕೆ ಇಂಟರ್‌ಪ್ರಿಟ್ ಮಾಡುತ್ತೀರಿ. ಅದು ಈ ಸದನದಲ್ಲಿ ಏತಕ್ಕೆ ಚರ್ಚೆ ಆಗಬೇಕು, ಏತಕ್ಕೆ ಪ್ರಸ್ತಾಪ ಆಗಬೇಕು.

ಅಧ್ಯಕ್ಷರು.—ಅದರ ಬಗ್ಗೆ ಪ್ರಸ್ತಾಪ ಬೇಡ ಬಿಡಿ.

ಶ್ರೀ ಪಿ. ಜಿ.ಆರ್ ಸಿಂಧ್ಯಾ.—ನಮ್ಮ ಪಕ್ಷದ ಆಂತರೀಕ್ಷವ್ಯವಹಾರಗಳನ್ನು ಏತಕ್ಕೆ ಇಲ್ಲಿ ತರುತ್ತೀರಿ. ನಿಮ್ಮ ಪಕ್ಷದ ಆಂತರೀಕ ವ್ಯವಹಾರಗಳನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ? ಮುಖ್ಯವಾಗಿ ನಾನು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ತೆಗೆದುಕೊಂಡಿರತಕ್ಕಂಥ ವಿಚಾರ ಏನು ಎಂದರೆ, ಮಾನ್ಯ ಲಕ್ಕಪ್ಪನವರು ಪತ್ರಿಕೆಗಳಲ್ಲಿ ಈ ರೀತಿ ವರದಿಯಾಗಿದೆ ಪತ್ರಿಕಾ ವರದಿ ಆಧಾರದ ಮೇಲೆ ರಾಮಕೃಷ್ಣ ಹೆಗಡೆಯವರನ್ನು ಕಮಿಟಿ ಇಂಡಕ್ಟ್ ಮಾಡಿದೆ ಎಂದು ಹೇಳಿದ್ದರೆ ನಾವು ಅಬ್ಜೆಕ್ಷನ್ ಮಾಡುತ್ತಿರಲಿಲ್ಲ. ಆದರೆ ಅವರು The committee has inducted ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಅವರು ಅದನ್ನೇ ಹೇಳಿದ್ದು. ಪತ್ರಿಕೆಗಳಲ್ಲಿ ಬಂದಿದೆ ಎಂದು ಹೇಳಿದರು.

ಶ್ರೀ ಪಿ.ಜಿ. ಆರ್. ಸಿಂಧ್ಯಾ.—ಅವರು ಆ ರೀತಿ ಹೇಳಿಲ್ಲ. The committee has inducted ಎಂದು ಹೇಳಿದ್ದಾರೆ.

ಅಧ್ಯಕ್ಷರು.—ನೀವು ಪತ್ರಿಕಾ ವರದಿಗಳ ಆಧಾರದ ಮೇಲೆ ತಾನೇ ಹೇಳಿದ್ದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನೋಡಿ, ಆದಕ್ಕೆ ಅವರು ಏನೂ ಹೇಳುತ್ತಾ ಇಲ್ಲ.

ಶ್ರೀ ಕೆ. ಲಕ್ಕಪ್ಪ —ಪತ್ರಿಕೆಗಳಲ್ಲಿ ಇಲ್ಲದಿರುವ ವಿಚಾರವನ್ನೂ ಬೇಕಾದರೆ ತಾವು ಇಮ್ಯಾಜಿನೇಷನ್ ಮಾಡಿಕೊಂಡು ಹೇಳುತ್ತೀರಿ. ನಾವು ಇರುವ ಫ್ಯಾಕ್ಟ್‌ನ ಎಲ್ಲಾ ಹೇಳಿದರೂ ತಾವು ಅದನ್ನು ಡಿನೈ ಮಾಡುತ್ತೀರಾ ? ವಿಷಯಗಳನ್ನು ಜೀರೋ ಹವರ್‌ನಲ್ಲಿ ನೀವು ಪತ್ರಿಕೆ ಆಧಾರದ ಮೇಲೆ ಅಲ್ಲದೆ ಬೇರೆ ಯಾವ ಆಧಾರದ ಮೇಲೆ ಎತ್ತುತ್ತೀರಾ ಹೇಳಿರಿ.

ಅಧ್ಯಕ್ಷರು —ಸರಿ ಈಗ. ಹಾದು.

ಶ್ರೀ ವಾಟಾಳ್ ನಾಗರಾಜ್.—ರಾಜ್ಯ ಸಭೆಯ ಮುಂದೆ ಇಟ್ಟಿರತಕ್ಕ ಆ ವರದಿಯನ್ನು ತರಿಸುವುದಕ್ಕೆ ಹೇಳಿದ್ದಿರಿ. ಅದು ಇನ್ನೂ ಬಂದಿಲ್ಲ. ಅದು ಈಗ ಪಬ್ಲಿಕ್ ಡಾಕ್ಯುಮೆಂಟ್ ಆಗಿದೆ.

ಅಧ್ಯಕ್ಷರು.—ಪಾರ್ಲಿಮೆಂಟ್ ಮುಂದೆ ಅದನ್ನು ಮಂಡಿಸಿರುವುದರಿಂದ ಅದು ಒಂದು ಪಬ್ಲಿಕ್ ಡಾಕ್ಯುಮೆಂಟ್. ಅದನ್ನು ಯಾರು ಬೇಕಾದರೂ ತರಿಸಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್.—ಅದು ಸಾರ್ವಜನಿಕ ಸ್ವತ್ತು. ಅದೇನೂ ಗುಪ್ತವಾದ ಡಾಕ್ಯುಮೆಂಟ್ ಅಲ್ಲ. ಈ ದೇಶದ ಉಪಪ್ರಧಾನಿಯವರ ಹೇಳಿಕೆಯ ಒಳಗಡೆ ರಾಜಕೀಯ ಇರಬಹುದು. ಜನತಾ ದಳದಲ್ಲಿ ಈಗ ಎರಡು ವರ್ಗವಾಗಿದೆ ಅದು ಎರಡು ಭಾಗವಾಗತಕ್ಕ ಸೂಚನೆ ಇಡೀ ದೇಶದಲ್ಲಿ ನಡೆದಿದೆ. ಪ್ರಧಾನಿಯವರದ್ದು ಒಂದು ಗುಂಪು ಉಪ ಪ್ರಧಾನಿಯವರದ್ದು ಒಂದು ಗುಂಪು. ಆದರಲ್ಲಿರುವ ರಾಜಕೀಯದ ಜೊತೆಗೆ ನಾವೂ ಇಲ್ಲಿ ರಾಜಕೀಯ ಮಾಡುವುದು ಬೇಡ, ಆದರೂ ಸಹಿತ.....

ಅಧ್ಯಕ್ಷರು..—ಆದರೂ ಸಹಿತ ಮಾಡೋಣ ಎಂದು ಹೇಳುತ್ತೀರಾ ?

ಶ್ರೀ ವಾಟಾಳ್ ನಾಗರಾಜ್.—ನಾನು ರಾಜಕೀಯ ಮಾಡುತ್ತಿಲ್ಲ. ನಾನು ರಾಜಕೀಯ ಮಾಡಿ, ಉಪಪ್ರಧಾನಿಯವರು ಏನು ಹೇಳಿದ್ದಾರೆ ಅದನ್ನು ಇಲ್ಲಿ ನಾನು ಚರ್ಚೆ ಮಾಡಿ ಅವರ ನಿಲುವಿಗೆ ಸಪೋರ್ಟ್ ಮಾಡಬೇಕೆಂಬ ಪ್ರಶ್ನೆ ಅಲ್ಲ. ಇಲ್ಲಿರುವುದು ಒಂದೇ ಒಂದು ಪ್ರಶ್ನೆ ಎಂದರೆ ನಮ್ಮ ಮಾಜಿ ಮುಖ್ಯಕಾರ್ಯದರ್ಶಿಯವರು ಆ ಕಮಿಟಿ ಮುಂದೆ ಏನು ಹೇಳಿದ್ದಾರೆ, ಅಷ್ಟಕ್ಕೇ ಸೀಮಿತ ಆಗಬೇಕೆಂಬುದು ನಮ್ಮ ವಿಚಾರ. ಅವರಿಗೂ ರಾಜಕೀಯಕ್ಕೂ ಸಂಬಂಧ ಇಲ್ಲ. ಫೋನನ್ನು ಕದ್ದು ಕೇಳತಕ್ಕದ್ದು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಮಾತ್ರ ನಡೆದಿದೆ ಎಂದು ನಾನು ಒಪ್ಪುವುದಿಲ್ಲ. ಈಗಲೂ ಫೋನ್‌ಟ್ಯಾಪ್ ಇಲಾಖೆಯಲ್ಲಿ ಕದ್ದು ಕೇಳುವ ಪರಿಪಾಠ ಇದೆ. ಅದಕ್ಕೆ ಒಂದು ಇಲಾಖೆಯೇ ಇದೆ. ಈಗಲೂ ಅದು ನಡೆಯುತ್ತಿರಬಹುದು. ಈಗಲೂ ಯಾರದ್ದೋ ಫೋನ್ ಕದ್ದು ಕೇಳುತ್ತಿರಬಹುದು. ಈ ಬಗ್ಗೆ ಹತ್ತು ವರ್ಷದ್ದು ಇಲ್ಲಿ ಸಮಗ್ರವಾಗಿ ಚರ್ಚೆ ಆಗಲಿ. ಫೋನ್ ಕದ್ದು ಕೇಳತಕ್ಕದ್ದು, ರಾಜಕೀಯ ಮಾಡತಕ್ಕದ್ದು ಇದರ ಬಗ್ಗೆ ಇಲ್ಲಿ ಚರ್ಚೆ ನಡೆಯಲಿ ಈ ಬಗ್ಗೆ ಎರಡು ನೋಟೀಸ್‌ಗಳು ಬಂದಿವೆ. ಈ ಸಭೆಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಈ ಸದನದಲ್ಲಿ ಈ ವಿಷಯದ ಮೇಲೆ ಚರ್ಚೆ ನಡೆಯುತ್ತಿದೆ ಎಂಬುದು ಗೊತ್ತಿದೆ. ಅವರು ಒಂದು ದಿವಸ ಈ ಸದನಕ್ಕೆ ಬಂದರೆ ಸಮಸ್ಯೆ ಬಗೆ ಹರಿಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಗಮನ ಸೆಳೆಯಂವ ಸೂಚನೆಗಳು

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಕಳುಹಿಸಿರುವ ಗಮನ ಸೆಳೆಯುವ ಸೂಚನೆಯಲ್ಲಿ ಸ್ವಲ್ಪ ಅದಲು ಬದಲು ಆಗಿದೆ. ನಾನು ಕಳುಹಿಸಿರುವ ನೋಟೀಸ್ ಈ ರೀತಿ ಇದೆ. ಸಹಕಾರ ಸಂಘಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತಗೊಂಡು ರೈತರಿಗೆ ತೊಂದರೆ ಆಗಿ ಸಹಕಾರಿ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತ ಗೊಂಡಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆಂದು ನೋಟೀಸ್ ಕಳಿಸಿದ್ದೆ.

ಅಧ್ಯಕ್ಷರು.—ಅಜೆಂಡಾದಲ್ಲಿ ಏನಿದೆ ಓದಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಹಕಾರ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ಮೂಲಕ ರೈತರಿಗೆ ಗೊಬ್ಬರ ವಿತರಣೆ ಯಾಗದೆ ತೊಂದರೆಯಾಗಿರುವ ಬಗ್ಗೆ ಎಂದು ಇದೆ.

ಅಧ್ಯಕ್ಷರು.—ಒಂದಕ್ಕೊಂದು ಸಂಬಂಧ ಇದೆಯಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಸಂಬಂಧ ಇದೆ. ಆದರೆ ನ್ಯಾಯ ಬೆಲೆ ಅಂಗಡಿಗಳ ಮೂಲಕ ಗೊಬ್ಬರ ವಿತರಣೆ ಆಗುವುದಿಲ್ಲ. ನ್ಯಾಯ ಬೆಲೆ ಅಂಗಡಿಗಳೇ ಬೇರೆ ಸಹಕಾರಿ ಸಂಸ್ಥೆಗಳ ಮೂಲಕ ವಿತರಣೆ ಆಗುವುದೇ ಬೇರೆ. ಅದಕ್ಕೆ ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ತಾವು ಗಮನ ಸೆಳೆಯಿರಿ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಸಹಕಾರ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ಮೂಲಕ ರೈತರಿಗೆ ಗೊಬ್ಬರ ವಿತರಣೆಯಾಗದೇ ತೊಂದರೆಯಾಗಿರುವ ಬಗ್ಗೆ ಮಾನ್ಯ ಸಹಕಾರ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.